# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1316 (1465)
ಸದಸ್ಯರ ಹೆಸರು : ಶ್ರೀ ಟಿ.ಎನ್. ಜವರಾಯಿ ಗೌಡ
ಉತ್ತರಿಸಬೇಕಾದ ದಿನಾಂಕ : 17.03.2026
ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸ್ಥಳಿಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ನಗರಸಭೆ ಮತ್ತು ಪುರಸಭೆಗಳಲ್ಲಿ ಕಾವೇರಿ ತಂತ್ರಾಂಶ ಸಮಸ್ಯೆಯಿಂದ ಇ-ಖಾತಾ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಇ-ಖಾತಾ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ, 07 ದಿನಗಳ ಅವಧಿಯಲ್ಲಿ ಇ-ಖಾತಾ ನೀಡಲು ಕ್ರಮವಹಿಸಲಾಗುತ್ತಿದೆ.<br><br>ಇ-ಖಾತಾ ಸೃಜನೆ ಮತ್ತು ಆಸ್ತಿ ಹಕ್ಕು ವರ್ಗಾವಣೆ ಪ್ರಕ್ರಿಯೆಯನ್ನು ಇ-ಆಸ್ತಿ ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ನೋಂದಣೆ ಪ್ರಕ್ರಿಯೆಗಾಗಿ ಕಾವೇರಿ ತಂತ್ರಾಂಶಕ್ಕೆ ಸದರಿ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ. ಪ್ರಸ್ತುತ ಆಸ್ತಿ ಹಕ್ಕು ವರ್ಗಾವಣೆ ಅಥವಾ ಇ-ಖಾತಾ ಸೃಜನೆ ಮಾಡಲು ಯಾವುದೇ ತಾಂತ್ರಿಕ ಸಮಸ್ಯೆಗಳಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಸರ್ಕಾರದ ತೆಗೆದುಕೊಂಡಿರುವ ಕ್ರಮಗಳೇನು; ಇದಕ್ಕೆ ಕಾರಣಗಳೇನು;(ವಿವರ ನೀಡುವುದು) | |
| ಇ) | 2025 ರ ಡಿಸೆಂಬರ್‌ನಲ್ಲಿ ಆರಂಭಿಸಿರುವ ಈ ಯೋಜನೆಯು 2-3 ತಿಂಗಳಲ್ಲಿ ತಂತ್ರಾಂಶದ ಸಮಸ್ಯೆ ಎಂದು ಹೇಳುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇ-ಖಾತಾ ನಿರ್ವಹಿಸುವ ಸಲುವಾಗಿ ಯಾವ ಸಾಫ್ಟ್‌ವೇರ್ ಕಂಪನಿಗೆ ಈ ಯೋಜನೆಯನ್ನು ವಹಿಸಲಾಗಿತ್ತು; ಆ ಕಂಪನಿಯ ಗುಣಪಟ್ಟವೇನು; ವಿವರವಾದ ಮಾಹಿತಿ ಒದಗಿಸುವುದು; | ಇ-ಆಸ್ತಿ ತಂತ್ರಾಂಶವನ್ನು ಕೇಂದ್ರ ಸರ್ಕಾರದ ಅಧೀನದ ರಾಷ್ಟ್ರೀಯ ಮಾಹಿತಿ ಕೇಂದ್ರ (NIC), ಬೆಂಗಳೂರು ಇವರಿಂದ ಅಭಿವೃದ್ಧಿಪಡಿಸಿ ಅನುಷ್ಠಾನ ಗೊಳಿಸಲಾಗಿದ್ದು, ಸದರಿ ತಂತ್ರಾಂಶವನ್ನು Karnataka State Data Centre (KSDC) ನಲ್ಲಿ host ಮಾಡಲಾಗಿರುತ್ತದೆ. ಸದರಿ ಡೇಟಾ ಸೆಂಟರ್ ಅನ್ನು ನವೆಂಬರ್-2025 ರಲ್ಲಿ ರೂ.3.12 ಕೋಟಿ ವೆಚ್ಚದಲ್ಲಿ ಉನ್ನತೀಕರಣಗೊಳಿಸಲಾಗಿದೆ. |
| ಈ) | ಈ ತಂತ್ರಾಂಶದ ಸಮಸ್ಯೆಯಿಂದ ಆನ್ ಲೈನ್ ಬಿಲ್ಡಿಂಗ್ ಲೈಸೆನ್ಸ್ ಪಡೆಯುವುದು, ಆಸ್ತಿ ವಹಿವಾಟು, ಪೌತಿ ಖಾತೆ ವರ್ಗಾವಣೆಗೆ ತೊಂದರೆ ಆಗಿರುವುದು ಹಾಗೂ ಇದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ಆದಾಯ ನಷ್ಟವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ 2.0 ತಂತ್ರಾಂಶ ಸರಿ ಹೋಗುವವವರೆಗೆ ಹಳೆಯ ಪದ್ಧತಿಯನ್ನು ಮುಂದುವರೆಸಲು ಸರ್ಕಾರ ಆದೇಶ ಹೊರಡಿಸುವುದೇ? | ಇ-ಖಾತಾ ಸೃಜನೆ ಮತ್ತು ಆಸ್ತಿ ಹಕ್ಕು ವರ್ಗಾವಣೆ ಪ್ರಕ್ರಿಯೆಯನ್ನು ಇ-ಆಸ್ತಿ ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಪ್ರಸ್ತುತ ಆಸ್ತಿ ಹಕ್ಕು ವರ್ಗಾವಣೆ ಅಥವಾ ಇ-ಖಾತಾ ಸೃಜನೆ ಮಾಡಲು ಯಾವುದೇ ತಾಂತ್ರಿಕ ಸಮಸ್ಯೆಗಳಿರುವುದಿಲ್ಲ.<br><br>ಕಟ್ಟಡ ಪರವಾನಿಗೆ / ಅನುಮತಿ ಪ್ರಕ್ರಿಯೆಯನ್ನು ನಿರ್ಮಾಣ-2 ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಕಟ್ಟಡ ಪರವಾನಿಗೆ ಪಡೆಯಲು Online ಮೂಲಕ ಅರ್ಜಿ ಸಲ್ಲಿಸಿ ಪಡೆಯಬಹುದಾಗಿದೆ. |

**ಸಂಖ್ಯೆ: ನಅಇ 101 ಜಿಇಎಲ್ 2026 (ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು